**OS: 34/2015**
**P.W-1**

**<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕೂಡ್ಲಿಗಿ</u>**

ದಿನಾಂಕಃ 21.02.2026 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಪಾಟೀ ಸವಾಲು 2(a), (e)ನೇ ಪ್ರತಿವಾದಿ ಪರ ವಕೀಲರಿಂದ</u>**

ನನ್ನ ಮಾವ ಮಾಬುಸಾಬ್ 1980 ರಲ್ಲಿ ಸರ್ವೆ ನಂಃ 512 ರಿಂದ 514ರ ಆಸ್ತಿಗಳನ್ನು ಖರೀದಿಸಿದ್ದರು ಎಂದರೆ ಸರಿ. ನನ್ನ ಮಾವ ಮಾಬುಸಾಬ್ ರವರು ಸದರಿ ಆಸ್ತಿಯಲ್ಲಿ ಆಯಿಲ್ ಮಿಲ್ ನಡೆಸಲು ಸದರಿ ಭೂಮಿಯನ್ನು ಭೂಪರಿವರ್ತನೆ ಮಾಡಿಸಿದ್ದರು ಎಂದರೆ ಸರಿ. ಟೌನ್ ಪ್ಲಾನಿಂಗ್ ಅಥಾರಿಟಿ, ಬೆಂಗಳೂರು ಇವರಿಂದ ದಿಃ 16.11.1981 ರಂದು ವಾಣಿಜ್ಯ ಉದ್ದೇಶಕ್ಕಾಗಿ ಅನುಮತಿ ಪಡೆದಿದ್ದರು ಎಂದರೆ ಸರಿ. ಸದರಿ ಅನುಮತಿಯ ಮೇರೆ ಚಮನ್ ಷಾ ವಲಿ ಆಯಿಲ್ ಮಿಲ್ ಸ್ಥಾಪಿಸಿಕೊಂಡಿದ್ದರು ಎಂದರೆ ಸರಿ. ಸದರಿ ಆಯಿಲ್ ಮಿಲ್ ಸ್ಥಾಪನೆ ಮಾಡಲು 1ನೇ ಪ್ರತಿವಾದಿ ಸಂಸ್ಥೆಯಿಂದ ನನ್ನ ಮಾವ ಸಾಲ ಪಡೆದಿದ್ದರು ಎಂದರೆ ಸರಿಯಲ್ಲ. ನನ್ನ ಮಾವ ಸದರಿ ಮಿಲ್ ನ್ನು 1ನೇ ಪ್ರತಿವಾದಿ ಸಂಸ್ಥೆಗೆ ಅಡಮಾನ ಮಾಡಿ ಸಾಲ ಪಡೆದಿದ್ದರು ಎಂದರೆ ಸರಿಯಲ್ಲ. ಸದರಿಯವರು ಮೃತಪಟ್ಟ ನಂತರ ಅವರ ಹೆಂಡತಿ ಮತ್ತು ಮೂರು ಜನ ಮಕ್ಕಳಿಗೆ ಬಂದಿರುತ್ತದೆ ಎಂದರೆ ಸರಿ. ನನ್ನ ಮಾವ ಮೃತಪಟ್ಟ ನಂತರ ನನ್ನ ಗಂಡ, ಕಬಲಹುಸೇನ್, ಕೆ. ಮುಸ್ತಫ ರವರು ಪಾಲುದಾರಿಕೆ ಸಂಸ್ಥೆಯಾದ ಎಂ.ಎಂ ಆಯಿಲ್ ಮಿಲ್ ನ್ನು ಪ್ರಾರಂಭಿಸಿದ್ದರು ಎಂದರೆ ಸರಿ. ಸದರಿ ಎಂ.ಎಂ ಆಯಿಲ್ ಮಿಲ್ ಆಸ್ತಿಯನ್ನು ಅಡಮಾನ ಮಾಡಿ 1ನೇ ಪ್ರತಿವಾದಿ ಸಂಸ್ಥೆಯಿಂದ ಸಾಲ ಪಡೆದಿದ್ದರು ಎಂದರೆ ಸರಿ. ಸದರಿ ಅಡಮಾನದ ಸಾಲದ ಹಣವನ್ನು ಪಾವತಿ ಮಾಡದೆ ಇರುವ ಕಾರಣಕ್ಕೆ 1ನೇ ಪ್ರತಿವಾದಿಯ ಸಂಸ್ಥೆಯವರು ಅದನ್ನು ಜಪ್ತುಪಡಿಸಿಕೊಂಡು ಸ್ವಾಧೀನಪಡಿಸಿಕೊಂಡಿದ್ದರು ಎಂದರೆ ಸರಿ. ಸದರಿ ಜಪ್ತುಪಡಿಸಿಕೊಂಡ ಆಸ್ತಿಯನ್ನು 2000 ಇಸವಿಯಲ್ಲಿ ಸಾರ್ವಜನಿಕ ಹರಾಜಿಗೆ ಇಟ್ಟಿದ್ದರು ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಸಂಸ್ಥೆಯವರು ಮಾಡಿದ ಸದರಿ ಹರಾಜಿನಲ್ಲಿ 2ನೇ ಪ್ರತಿವಾದಿಯು ರೂ. 8,35,000/- ಗಳಿಗೆ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ತದ ನಂತರ ಸದರಿ ಖರೀದಿಯನ್ನು ಖಾಯಂ ಮಾಡಲಾಗಿತ್ತು ಎಂದರೆ ಸರಿಯಲ್ಲ. ಖರೀದಿಸಿದ ನಂತರ 2ನೇ ಪ್ರತಿವಾದಿ ಸದರಿ ಆಸ್ತಿಯನ್ನು ಗಿರಣಿಯನ್ನು ನಡೆಸುತ್ತಿದ್ದರು ಎಂದರೆ ಸರಿ. ತದ ನಂತರ ಗಿರಣಿಗೆ ಸಂಬಂಧಿಸಿದಂತೆ 2ನೇ ಪ್ರತಿವಾದಿಯವರು 1ನೇ ಪ್ರತಿವಾದಿ ಸಂಸ್ಥೆಯಲ್ಲಿ ಸಾಲ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

2011 ರಲ್ಲಿ 2 ನೇ ಪ್ರತಿವಾದಿ ಸಾಲ ಮರುಪಾವತಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ತದ ನಂತರ ದಿಃ 02.08.2012 ರಲ್ಲಿ 1 ನೇ ಪ್ರತಿವಾದಿಯವರು 2 ನೇ ಪ್ರತಿವಾದಿಯ ಹೆಸರಿನಲ್ಲಿ ನೊಂದಾಯಿತ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2002 ರಲ್ಲಿ ಚಮನ್ ಷಾ ವಲಿ ಆಯಿಲ್ ಮಿಲ್ ನ್ನು ಮಾರಾಟ ಮಾಡಿ ಓ.ಟಿ.ಎಸ್ ನಲ್ಲಿ ಮಾರಾಟ ಮಾಡಿ ಸದರಿ ಖಾತೆಯನ್ನು ಮುಕ್ತಾಯಗೊಳಿಸಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಮಿಲ್ ನ್ನು ಮಾರಾಟ ಮಾಡಿ ಎಂ.ಎಂ ಆಯಿಲ್ ಮಿಲ್ ಮೇಲೆ ಮಾಡಿದ ಸಾಲವನ್ನು ತೀರಿಸಿರುತ್ತೇವೆಂದು ನುಡಿಯುತ್ತಾರೆ. ಸದರಿ ಚಮನ್ ಷಾ ವಲಿ ಆಯಿಲ್ ಮಿಲ್ ನ್ನು ಕರಡಿ ಕೊಟ್ರಯ್ಯರವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ. ಚಮನ್ ಷಾ ವಲಿ ಆಯಿಲ್ ಮಿಲ್ ಮೇಲೆ ಮಾಡಿದ ಸಾಲ ಬೇರೆ, ಎಂ.ಎಂ ಆಯಿಲ್ ಮಿಲ್ ಮೇಲೆ ಮಾಡಿದ ಸಾಲ ಬೇರೆ ಎಂದರೆ ಚಮನ್ ಷಾ ವಲಿ ಆಯಿಲ್ ಮಿಲ್ ಮೇಲೆ ಯಾವುದೇ ಸಾಲ ಮಾಡಿರಲಿಲ್ಲ.

ಎಂ.ಎಂ ಆಯಿಲ್ ಮಿಲ್ ನ್ನು 2000 ಇಸವಿಯಲ್ಲಿ 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಹೆಸರಿಗೆ ಮಾರಾಟ ಮಾಡಿದ್ದರಿಂದ 2009 ರಲ್ಲಿ ನನ್ನ ಅತ್ತೆ ನಮ್ಮ ಹೆಸರಿಗೆ ದಾನ ಪತ್ರ ಮಾಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಸದರಿಯವರಿಗೆ ದಾನ ಮಾಡಲು ಯಾವುದೇ ಹಕ್ಕು ಇಲ್ಲದೆ ಇದ್ದರು ಸಹ ಹಕ್ಕು ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಅತ್ತೆ ಕರಡಿ ಕೊಟ್ರಯ್ಯನವರಿಗೆ ಚಮನ್ ಷಾ ವಲಿ ಆಯಿಲ್ ಮಿಲ್ ನ್ನು ಮಾರಾಟ ಮಾಡಿದ್ದರ ಬಗ್ಗೆ ನನಗೆ ಮಾಹಿತಿ ಇದೆ. ಸದರಿ ಕ್ರಯಪತ್ರದಲ್ಲಿ 2 ಎಕರೆ 64 ಸೆಂಟ್ಸ್ ವಿಸ್ತೀರ್ಣದ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ 2 ಎಕರೆ 64 ಸೆಂಟ್ಸ್ ಆಸ್ತಿ ಜಮೀನನ್ನು ಮಾತ್ರ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಅದರಲ್ಲಿ ಮಿಲ್ ಮತ್ತು ಮನೆ ಇದೆ. ಸದರಿ ಆಸ್ತಿಯ ಚೆಕ್ಕುಬಂದಿಯ ಉತ್ತರ ಭಾಗಕ್ಕೆ ಮೃತ 2 ನೇ ಪ್ರತಿವಾದಿಯ ಜಿನ್ನಿಂಗ್ ಫ್ಯಾಕ್ಟರಿ ಇದೆ ಎಂದು ಬರೆದಿದೆ ಎಂದರೆ ನನಗೆ ಗೊತ್ತಿಲ್ಲ. 2002 ನೇ ಇಸವಿಯಲ್ಲಿ 2 ನೇ ಪ್ರತಿವಾದಿಯ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿಯಲ್ಲ.

(1 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಿದ್ದು ಅದನ್ನೇ 2 ನೇ ಪ್ರತಿವಾದಿ ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ.)

**OS: 34/2015**
**P.W-1**

(1 ಮತ್ತು 2 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಿದ್ದು ಅದನ್ನೇ 2(d)(2) and (3) ನೇ ಪ್ರತಿವಾದಿ ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ.)

ಮರು ವಿಚಾರಣೆ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**